MEMBERS OF FOOD COMMITTEES IN GULBARGA DISTRICT

243 SRI BAPU GOWDA RAYAPPA (Shahapur).—Will the Minister of State for Food and Civil Supplies be pleased to state.—

(*a*) whether Government has constituted food committees in the Gulbarga District ;

(*b*) if so, the names and addresses of members of the food committees (Talukwise figures may be supplied) ?

SMT. E. E. VAZ (Minister of State for Food and Civil Supplies).—

(*a*) Yes.

(*b*) A list indicating the names and addresses of members of the Advisory Committees for Food and Civil Supplies in respect of each Taluk of Gulbarga District is placed on the Table of the House

ಶ್ರೀ ಬಾಪೂಗೌಡ ರಾಯಪ್ಪ : ಫುಡ್ ಕಮಿಟಿಗಳನ್ನು ಕಾನ್ಸ್ಟಿಟ್ಯೂಟ್ ಮಾಡಿದ್ದೀರಿ. ಹೆಸರುಗಳನ್ನು ಯಾರು ಕಳುಹಿಸಿದ್ದಾರೆ ? ಯಾವ ಆಧಾರದ ಮೇಲೆ ಫುಡ್ ಕಮಿಟಿಗಳನ್ನು ರಚನೆ ಮಾಡಿದ್ದೀರಿ?

†ಶ್ರೀಮತಿ ಇ. ಇ. ವಾಜ್ :— ಫುಡ್ ಕಮಿಟಿಗಳನ್ನು ನಾನಾ ಸಲಹೆಗಳ ಮೇಲೆ ಮಾಡಿದೆ. ಡೆಪ್ಯುಟಿ ಕಮಿಷನರ್ ಮತ್ತು ಅಲ್ಲಿಯ ಲೋಕಲ್ ಲೀಡರ್ಸ್, ಮುಖಂಡರು ಯಾರಿದ್ದಾರೆ, ತಾಲ್ಲೂಕ್ ಬೋರ್ಡ್ ನವರು, ಇವರನ್ನೆಲ್ಲಾ ವಿಚಾರಮಾಡಿ ಯಾರಿಗೆ ಕೊಡಬೇಕೋ ಅವರಿಗೆಲ್ಲ ರೆಪ್ರೆಸೆಂಟೇಷನ್ ಕೊಟ್ಟಿದ್ದು ಆಗಿದೆ.

ಶ್ರೀ ಬಾಪೂಗೌಡ ರಾಯಪ್ಪ :—ತಾವು ಶೋರಾಪುರ ಮತ್ತು ಶಹಾಪುರ ಪ್ರಾಪರ್‌ನಲ್ಲಿರತಕ್ಕ ಜನರನ್ನೇ ಹಾಗು ಕಮಿಟಿಗಳನ್ನು ಮಾಡಿದ್ದೀರಿ. ಆ ಕಮಿಟಿಗಳನ್ನು ಮಾಡುವ ಕಾಲಕ್ಕೆ ಡೆಪ್ಯುಟಿ ಕಮಿಷನರ್ ರೆಕಮೆಂಡೇಷನ್ ಕೇಳಲಿಲ್ಲ. ಕೇವಲ ತಮ್ಮ ಪಕ್ಷದ ಮುಖಂಡರನ್ನೇ ಕೇಳಿ ಲಿಸ್ಟ್ ಮಾಡಿದ್ದೀರಿ. ಆ ರೀತಿ ಮಾಡಿರುವುದು ಸರಿಯೇ ?

ಶ್ರೀಮತಿ ಇ. ಇ. ವಾಜ್ :—ಸರ್ಕಾರದವರು ಎಲ್ಲಾ ವಿಚಾರಗಳನ್ನು ಗಮನಿಸಿ ಸೂಕ್ತವಾಗಿ ರೆಪ್ರೆಸೆಂಟೇಷನ್ ಕೊಟ್ಟಿದ್ದೇವೆ. ಎಲ್ಲಾದರೂ ರೆಪ್ರೆಸೆಂಟೇಷನ್ ಕೊಟ್ಟಿಲ್ಲದಿರುವುದನ್ನು ಸರ್ಕಾರದ ಗಮನಕ್ಕೆ ತಂದರೆ ಪರಿಶೀಲಿಸಬಹುದು.

ಶ್ರೀ ವಿಶ್ವನಾಥರೆಡ್ಡಿ. ಬೇರೆ ಬೇರೆ ಕಡೆಗಳಿಂದ ಸಲಹೆಗಳನ್ನು ಪಡೆದು ಸಮಿತಿಗಳನ್ನು ರಚಿಸಲಾಗಿದೆ ಎಂದು ಹೇಳುತ್ತೀರಿ. ಡೆಪ್ಯುಟಿ ಕಮಿಷನರ್, ಲೋಕಲ್ ಆಫೀಸರ್ಸ್ ಸಲಹೆಗಳನ್ನು ಕೊಟ್ಟಿದ್ದಾರೆ ಅವುಗಳನ್ನು ಹೌಸ್ ಮುಂದೆ ಇಡುತ್ತೀರಾ ? ತಮ್ಮ ಪಕ್ಷದ ಜನರನ್ನೇ ಸೇರಿಸಿದ್ದೀರಿ ರೆಪ್ರೆಸೆಂಟೇಟಿವ್ ಕ್ಯಾರೆಕ್ಟರ್ ಮೇಲೆ ಮಾಡಿಲ್ಲ ಎಂದು ಹೇಳುತ್ತೇನೆ.

ಶ್ರೀಮತಿ ಇ. ಇ. ವಾಜ್ :—ನಮ್ಮ ಪಕ್ಷದವರನ್ನೇ ಹಾಕಿದ್ದಾರೆ ಎಂದು ಟೀಕೆ ಮಾಡಿದ್ದಾರೆ, ಅದು ತಪ್ಪು ಭಾವನೆ ಎಂದು ನನಗೆ ಅನ್ನಿಸುತ್ತದೆ. ಆ ರೀತಿ ಹೇಳುವುದಕ್ಕಾಗುವುದಿಲ್ಲ. ಸೋಷಿಯಲ್ ವರ್ಕರ್ಸ್ ಯಾರಿದ್ದಾರೆ, ಯಾರು ಪ್ರಮುಖರು ಸಲಹೆಗಳನ್ನು ಮಾಡಿದ್ದಾರೆ, ಅವರನ್ನು ಸಮಿತಿಯೊಳಗೆ ಸದಸ್ಯರನ್ನಾಗಿ ಹಾಕಿದ್ದೇವೆ.

---

*Copy placed in the Mysore Legistalure library vide No 10/dated 12-9-73.

ಶ್ರೀ ವಿ ಎನ್. ಪಾಟೀಲ್.—ಮಾನ್ಯ ಮಂತ್ರಿಗಳು ಬೀದರು ಜಿಲ್ಲೆಗೆ ಪ್ರವಾಸ ಬಂದಿದ್ದಾಗ ಅಲ್ಲಿ ಯಾವ ರೀತಿಯಾವ ಅಡ್ವೈಸರಿ ಫುಡ್ ಕಮಿಟಿ ಮಾಡಬೇಕೆಂದು ಒಂದು ಪಟ್ಟಿಯನ್ನು ತಮಗೆ ಕೊಡ ಲಾಗಿತ್ತು. ಅದರಲ್ಲಿ ಮೂರು ಜನ ಎಂ.ಎಲ್.ಎ. ಗಳ ಹೆಸರುಗಳು ಇದ್ದವು, ಆದರೆ ಈಗ ತಾವು ಕೊಟ್ಟಿ ರುವ ಪಟ್ಟಿಯನ್ನು ನೋಡಿದರೆ ಅದರಲ್ಲಿ ಬರೀ ನಿಮ್ಮ ಕಾಂಗ್ರೆಸ್ಸು 'ಆರ್' ಪಕ್ಷದವರ ಪ್ರತಿನಿಧಿಗಳನ್ನೇ ಹಾಕಿರುವುದು ಕಂಡುಬರುತ್ತಿದೆ, ಮತ್ತು ಇದರಲ್ಲಿ ಸ್ಥಳೀಯ ಎಂ.ಎಲ್.ಎ ಗಳನ್ನು ಕೂಡ ಹಾಕಿಲ್ಲ ಬರೀ ಡಿ.ಸಿ.ಸಿ. ಕಾಂಗ್ರೆಸ್ ಆರ್ ಪ್ರೆಸಿಡೆಂಟರು ಹಾಗೂ ಸೆಕ್ರಟರಿಗಳು ಇಂತಹವರನ್ನೇ ಆರಿಸಿ ಹಾಕಲಾಗಿದೆ? ಇದು ಸರಿಯಾಗಿದೆ ಎಂದು ತಮ್ಮ ವಿಚಾರವೇ?

ಶ್ರೀಮತಿ ಇ. ಇ. ವಾಜ್. ಇದರಲ್ಲೇನೂ ವಿಶೇಷವಾದ ಪ್ರಾತಿನಿಧ್ಯ ಎಂದು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಬಾಪುಗೌಡ ರಾಯಪ್ಪ.—ನೀವು ಇಲ್ಲಿ ಕೊಟ್ಟಿರುವ ಪಟ್ಟಿಯಲ್ಲಿ ಷಹಾಪುರ ಪಟ್ಟಿ ನೋಡಿದರೆ ಇದರಲ್ಲಿ ಶಿವಣ್ಣ ಡಿ.ಸಿ.ಸಿ. ಪ್ರೆಸಿಡೆಂಟ್ 'ಆರ್' ಎಂದು ಇದೆ. ಇನ್ನೊಂದು ಹೆಸರು ಎಂದರೆ ಶ್ರೀ ಹುಳ ವಯ್ಯ ಎನ್ನುವವರು ಅಲ್ಲಿ ಡಿಫೀಟೆಡ್ ಕಾಂಗ್ರೆಸ್ ಕ್ಯಾಂಡಿಡೇಟರಾಗಿದ್ದವರು, ಹೀಗೆ ಪ್ರತಿಯೊಬ್ಬರೂ ಷಾಹಾಪುರದ ಕಡೆಯಿಂದ ಬಂದವರೇ ಆಗಿದ್ದವರು, ಇಲ್ಲಿ ಕಮಿಟಿಯನ್ನು ನೇಮಕ ಮಾಡುವಾಗ ಸರಿಯಾದ ಪ್ರತಿನಿಧಿಗಳನ್ನು ಸರಕಾರ ಆರಿಸಲಿಲ್ಲ? ಇದರ ಬಗ್ಗೆ ಸರಿಯಾದ ಕಮಿಟಿ ಆಯ್ಕೆ ಮಾಡಲು ಯತ್ನ ಮಾಡು ತ್ತೀರಾ?

ಶ್ರೀಮತಿ ಇ. ಇ. ವಾಜ್.—ಇದರಲ್ಲಿ ಅಡ್ರಸ್ಸುಗಳನ್ನು ಕೊಡುವಾಗ ಶಿವಣ್ಣ ಡಿ.ಸಿ.ಸಿ. ಪ್ರೆಸಿಡೆಂಟ್ ಎಂದು ಕೊಟ್ಟಿದ್ದಾರೆ. ಅದರಂತೆ ಹಾಕುವುದರಲ್ಲಿ ತಪ್ಪೇನಿಲ್ಲ.

SRI M. H. JAYAPRAKASH NARAIN.—At Taluka and District levals, it is found that representation of Scheduled Castes and Scheduled Tribes has not been given. Will the Hon. Minister add some members and see that representation is given to them ?

ಅಧ್ಯಕ್ಷರು.—ಈ ಪ್ರಶ್ನೆ ಇದರಲ್ಲಿ ಬರುವುದಿಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್.—ಅದು ಹೇಗೆ ಬರುವುದಿಲ್ಲ. ಇದು ಸಂಸಂಬದ್ಧ ವಾಗಿದೆ. ಗುಲ್ಬರ್ಗ ಜಿಲ್ಲೆಯಲ್ಲೇ ನಾನು ಕೇಳುತ್ತಿರುವುದು.

ಅಧ್ಯಕ್ಷರು.—ಯಾವ ಪ್ರಶ್ನೆ ಸಂಸಂಬದ್ಧ ಯಾವುದು ಸಂಸಂಬದ್ಧವಲ್ಲ ಎನ್ನುವುದು ನನಗೆ ಗೊತ್ತು. ಆದರ ಬಗ್ಗೆ ಈಗ ಹೇಳಬೇಡಿ.

ಶ್ರೀ ಬಾಪುಗೌಡ ರಾಯಪ್ಪ —ಇಲ್ಲಿರುವ ಹತ್ತು ತಾಲ್ಲೂಕುಗಳಲ್ಲೂ ಫುಡ್ ಕಮಿಟಿ ನೇಮಕ ಮಾಡು ವಾಗ ಬರೀ ಜಿಲ್ಲೆಗೆ ಸೇರಿದ ಡಿ.ಸಿ.ಸಿ ಪ್ರೆಸಿಡೆಂಟರು ಇತ್ಯಾದಿ ರೆಪ್ರಸೆಂಟೇಷನ್ ಕೊಡಲು ಕಾರಣವೇನು? ಬೇರೆ ಕಡೆಯಿಂದ ಏಕೆ ಹಾಕಲಿಲ್ಲ?

ಶ್ರೀಮತಿ ಇ. ಇ. ವಾಜ್.—ಡಿ.ಸಿ.ಸಿ. ಪ್ರೆಸಿಡೆಂಟರಾಗಿದ್ದರು ಎಂದು ಅವರನ್ನು ಹಾಕಬಾರದು ಎಂದೇ ನಿಲ್ಲ ಯಾರು ಹಾಕಬೇಕೆಂದು ಶಿಫಾರಸು ಬಂತು ಅವರನ್ನು ಇಲ್ಲಿ ನೇಮಕ ಮಾಡಲಾಗಿದೆ.

ಶ್ರೀ ಜೆ. ಎಲ್ ಕಬಾಡಿ.—ಗುಲ್ಬರ್ಗಾ ಜಿಲ್ಲೆಯಲ್ಲಿ ಬರೀ ಕಾಂಗ್ರೆಸ್ಸು 'ಆರ್' ಪಕ್ಷದವರನ್ನು ನೇಮಿ ಸುವಾಗ ಇದರಲ್ಲಿ ಹರಿಜನರು ಇರಬೇಕೆಂದು ಪ್ರತಿಯೊಂದು ತಾಲ್ಲೂಕಿನಲ್ಲೂ ನೇಮಕ ಮಾಡಿದ್ದೀರಾ?

ಶ್ರೀಮತಿ ಇ. ಇ. ವಾಜ್ —ಗುಲ್ಬರ್ಗಾ ಜಿಲ್ಲೆಯಿಂದ ಪ್ರತಿಯೊಂದು ತಾಲ್ಲೂಕಿನಲ್ಲೂ ಈ ಕಮಿಟಿ ಗಾಗಿ ನೇಮಕ ಮಾಡುವಾಗ ಆದಷ್ಟು ಅಲ್ಲಿರುವ ಜಿಲ್ಲಾಧಿಕಾರಿಗಳು ಇಂತಹವರ ಹೆಸರುಗಳು ಇರಬಹುದು ಎಂದು ತಿಳಿಸಿದ್ದಾರೆ. ಇದರಲ್ಲಿ ಪ್ರತಿ ತಾಲ್ಲೂಕಾ ಕಮಿಟಿಯಲ್ಲೂ ಹರಿಜನರು ಇದ್ದಾರೆಯೇ ಇಲ್ಲವೇ ಎಂದು ಹೇಳಲು ನನ್ನ ಬಳಿ ಪೂರ್ತಿ ಲಿಸ್ಟ್ ಇಲ್ಲ. ಆದಷ್ಟು ಮಟ್ಟಿಗೆ ಪ್ರತಿಯೊಂದು ಕಡೆಯಲ್ಲೂ ಪೆಡ್ಯೂಲ್ಡ್ ಕ್ಯಾಸ್ಟ್ ಹಾಗೂ ಹಿಂದುಳಿದವರನ್ನು ನೋಡಿಕೊಂಡು ನೇಮಿಸಬಹುದು.